# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು - ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/385/ಗ್ರಾಪಂಕಾ/2013, ದಿನಾಂಕ:12-11-2013.
2. ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:LOK/14-A/ENQ-1/2014/ARE-8 ದಿನಾಂಕ: 25-09-2017.
3. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ; LOK/ARE-8/14-A/Enq.1/2014 ದಿನಾಂಕ: 26-09-2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/761/ಗ್ರಾಪಂಕಾ/2017, ದಿನಾಂಕ: 08-11-2017.
5. ಮಾನ್ಯ ನಿಬಂಧಕರು, ವಿಚಾರಣೆಗಳು-08 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಸರ್ಕಾರದಿಂದ ಕೋರಿದ ಸ್ಪಷ್ಟೀಕರಣ ಪತ್ರ ಸಂಖ್ಯೆ: ಗ್ರಾಅಪ/761/ಗ್ರಾಪಂಕಾ/2017, ದಿನಾಂಕ:10.08.2018.
6. ಮಾನ್ಯ ನಿಬಂಧಕರು, ವಿಚಾರಣೆಗಳು-08 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ತಿದ್ದುಪಡಿ ಶಿಫಾರಸ್ಸುಸಂಖ್ಯೆ;LOK/ARE-8/ENQ-1/2014, ದಿನಾಂಕ: 15-11-2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iv) ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಕೊಡಸೋಗೆ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ 2007-08ನೇ ಸಾಲಿನಲ್ಲಿ ಕೊಡಸೋಗೆ ಗ್ರಾಮ ಪಂಚಾಯತಿಯಲ್ಲಿ 12ನೇ ಹಣಕಾಸು ಯೋಜನೆಯಲ್ಲಿ ವಿವಿಧ ಕಾಮಗಾರಿಗಳು ಮತ್ತು ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಗ್ರಾಮಗಳ ವಿವಿಧ ಬಡವಣೆಯ ಬೀದಿಗಳಿಗೆ ಸೋಡಿಯಂ ದೀಪವನ್ನು ಅಳವಡಿಸಲು ದಿನಾಂಕ: 19.07.2007 ರಂದು ಒಟ್ಟು 42 ವಿದ್ಯುತ್ ಸೋಡಿಯಂ ದೀಪಗಳನ್ನು ಖರೀದಿಸಲು ರೂ.3,25,000/-ಗಳಿಗೆ ಅನುಮೋದನೆಗೊಂಡಿದ್ದು, ಅನುಮೋದನೆಗಿಂತ ಮೊದಲೇ ಅಂದರೆ ದಿನಾಂಕ: 30.06.2007 ರಂದು ಸೋಡಿಯಂ ದೀಪಗಳನ್ನು ಖರೀದಿಸಿ ನಿಯಮ ಉಲ್ಲಂಘನೆ ಮಾಡಿರುತ್ತಾರೆ. ದಿನಾಂಕ: 19.07.2007 ರಂದು ಗ್ರಾಮ ಸಭಾ ನಿರ್ಣಯದಂತೆ ಸೋಡಿಯಂ ದೀಪದ ದರವು ಹೆಚ್ಚಾಗಿರುವುದರಿಂದ ಅದೇ ದಿನ ಕಡಿಮೆ ದರದ ಮರ್ಕ್ಯುರಿ/ಸಿ.ಎಫ್.ಎಲ್ ದೀಪಗಳನ್ನು ಖರೀದಿಸಲು ಅನುಮೋದನೆ ನೀಡಿರುತ್ತಾರೆ. ಆದರೆ ಸಭಾ ನಿರ್ಣಯಕ್ಕಿಂತ ಮೊದಲೇ ಅಂದರೆ ದಿನಾಂಕ: 30-06-2007ರಂದು ಕೊಟೇಶನ್ ಪಡೆದು ನಿಯಮ ಉಲ್ಲಂಘನೆ ಮಾಡಿರುತ್ತಾರೆ. ಸೋಡಿಯಂ ದೀಪದ ಸರಬರಾಜು ಆದೇಶ ನೀಡಿ, ಅದಕ್ಕೆ ವ್ಯತಿರಿಕ್ತವಾಗಿ ದಾಸ್ತಾನು

ವಹಿಯಲ್ಲಿ ಸರಬರಾಜುದಾರರಿಂದ ಸಿ.ಎಫ್.ಎಲ್ ದೀಪವನ್ನು ಪಡೆದಿರುವುದಾಗಿ ಮತ್ತು ದಾಸ್ತಾನು ವಹಿಯಲ್ಲಿ ಅದನ್ನೆ ಬರೆದು ದಾಖಲೆಗಳಲ್ಲಿ ಒಂದೊಂದು ಬಗೆಯ ವಿವರ ನಮೂದಿಸಿರುತ್ತಾರೆ. ಸೋಡಿಯಂ ದೀಪಕ್ಕೆ ಬದಲಾಗಿ ಮರ್ಕುರಿ ದೀಪಗಳನ್ನು ಖರೀದಿಸಿದ ಅವ್ಯವಹಾರ ಬೆಳಕಿಗೆ ಬಂದ ಕೂಡಲೇ ಮರ್ಕ್ಯುರಿ ದೀಪಕ್ಕೆ ಕೊಟೇಶನ್ ಸೃಷ್ಟಿಸಿ ಹಣ ಪಾವತಿಸಿ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ. ನಗದು ಪುಸ್ತಕದಲ್ಲಿ ಚೆಕ್ ನಂ.424742, ದಿನಾಂಕ: 17.07.2007 ರಂದು ರೂ.72,000/- ಡ್ರಾ ಮಾಡಿ ಸದರಿ ಮೊತ್ತವನ್ನು ಮೆ:ಪ್ರಕಾಶ್ ಎಂಟರ್‌ಪ್ರೈಸಸ್, ಗುಂಡ್ಲುಪೇಟೆ ಎಂದು ನಮೂದಿಸಿರುತ್ತಾರೆ ಆದರೆ ಈ ಬಗ್ಗೆ ರಶೀದಿ ಮತ್ತು ದಾಖಲೆಗಳನ್ನು ಇಟ್ಟಿರುವುದಿಲ್ಲ ಹಾಗೂ ವಿದ್ಯುತ್ ದೀಪಗಳ ದಾಸ್ತಾನು ದೃಢೀಕರಣ ಮತ್ತು ಹಣ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ಇಡದೆ ನಿಯಮ ಉಲ್ಲಂಘನೆ ಮಾಡಿದ್ದು, ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಸದರಿಯವರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮ 1966 ರ ನಿಯಮ 3(1)(ii) ರಿಂದ (iii) ರ ಅನ್ವಯ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರು ಅಂಗೀಕರಿಸಿ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 214(1)(a) ಅನ್ವಯ "5% ನಿವೃತ್ತಿ ಸೌಲಭ್ಯಗಳನ್ನು 5 ವರ್ಷಗಳ ಅವಧಿಗೆ ತಡೆಹಿಡಿಯುವ" ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಇವರಿಗೆ ನಿಯಮಾನುಸಾರ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಯಾವುದೇ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ.

ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ "5% ನಿವೃತ್ತಿ ಸೌಲಭ್ಯಗಳನ್ನು 5 ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆ" ಗೆ ಸಂಬಂಧಿಸಿದಂತೆ ಸರ್ಕಾರದ ಪತ್ರ ದಿನಾಂಕ:10.08.2018 ರಂದು ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರಿಗೆ ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗಿತ್ತು. ಈ ಸಂಬಂಧ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮಾನ್ಯ ನಿಬಂಧಕರು, ದಿನಾಂಕ:15.11.2018 ರಂದು ಬರೆದಿರುವ ಪತ್ರದೊಂದಿಗೆ ಹೊರಡಿಸಿರುವ ತಿದ್ದುಪಡಿ ಶಿಫಾರಸ್ಸಿನಲ್ಲಿ "withholding 5% of pension of the DGO Sri.H.V.Prabhakar for a period of 5 years" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-8 ಕರ್ನಾಟಕ ಲೋಕಾಯುಕ್ತ ರವರು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರ ವಿರುದ್ಧ ಆರೋಪವು ಸಾಬೀತಾಗಿರುವುದಕ್ಕೆ ವಿವರವಾದ ವರದಿಯ ಪ್ರಮುಖ ಅಂಶಗಳು ಈ ಕೆಳಗಿನಂತೆ ಪುನರುಚ್ಚರಿಸಿದೆ:-

DGO was working as Secretary at Kodasoge Grama Panchayath during the year 2007-08. The Executive Officer, Taluk Panchayath, Gundlupet had given approval on 19.07.2007 for purchase of 42 electric sodium lamps for Rs.3,25,000/-. The purchase of CFL lights instead of Sodium lights is not disputed by the DGO, but the DGO contends that the CFL lights were purchased as per the Resolution of the Grama Panchayath. The Disciplinary Authority has lead evidence through PW-1 and 2 to show that the DGO has not maintained proper records regarding payment of amount through to the supplier and has also not paid the amount through cheques directly to the supplier. The DGO in his evidence has marked a receipt as Ex.D.2 dt.07.07.2007 which is in a letter head. The amount shown in it is Rs.73,000/-. However, as per Rules, the payments should have been made only through crossed cheques. The DGO has violated the rules by not paying the

amount through cheques. Further, the document Ex.D-2 is also a doubtful document which must have been created later. DGO has produced a copy of the resolution of the General Sabha. The same is marked as Ex.D-3. This Resolution 19-07-2017 is not disputed. This Resolution is made only after the purchase of CFL Lamps. The defence of the DGO that he has purchased CFL lights only after getting node of the President and the Village Panchayath is not supported by evidence. The evidence placed by the Disciplinary Authority establishes through Preponderance of Probabilities that when the quotation was called by the DGO for CFL Lamps, there was no Ressolution either of the Grama Panchayath or the Taluk Panchayath. Further, it is also established by the Disciplinary Authority that DGO has not maintained proper receipts or documents regarding payment of money to the supplier and has also violated Rule 72 of the Karnataka Financial Code by not issuing crossed cheque for the payments.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ಯಾವುದೇ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಅಪರ ನಿಬಂಧಕರು ವಿಚಾರಣೆಗಳು-8 ರವರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ, ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯ್ತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 214(1)(a) ಅನ್ವಯ "withholding 5% of pension of the DGO Sri.H.V.Prabhakar for a period of 5 years" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಇವರಿಗೆ 2ನೇ ಕಾರಣ ಕೇಳುವ ನೋಟೀಸನ್ನು ನೀಡಲಾಗಿರುತ್ತದೆ ಆದರೆ ಸದರಿಯವರು ಯಾವುದೇ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 214(1)(a) ಅನ್ವಯ "withholding 5% of pension of the DGO Sri.H.V.Prabhakar for a period of 5 years" ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/761/ಗ್ರಾಪಂಕಾ/2017,**
**ಬೆಂಗಳೂರು, ದಿನಾಂಕ:12-12-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ 214(1)(a) ಅನ್ವಯ "withholding 5% of pension of the DGO Sri.H.V.Prabhakar for a period of 5 years" ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್) 12/12
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

2.ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3.ಅಪರ ನಿಬಂಧಕರು, ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4.ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ.
6.ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ.
7.ಶ್ರೀ ಹೆಚ್.ವಿ.ಪ್ರಭಾಕರ್, ಕಾರ್ಯದರ್ಶಿ, ಕೊಡಸೋಗೆ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ,
8.ಗಣಕ ಕೋಶ
9.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.